ರೋಗನಿರೋಧಕ ಮಲೇರಿಯ ಮಾತ್ರೆ ಕೊಡಬೇಕೆಂದು ವೈದ್ಯರಲ್ಲಿ ಒಂದೇ ಸಮನೆ ದುಂಬಾಲು ಬಿದ್ದಿದ್ದೆವು. ನಮ್ಮಲ್ಲಿ ಇಂತಹದೊಂದು ಔಷಧಿ ಸದ್ಯಕ್ಕೆ ಬಂದಿಲ್ಲವೆಂದು ನಮಗೊಬ್ಬೊಬ್ಬರಿಗೂ ಪ್ರತ್ಯೇಕವಾಗಿ ತಿಳಿ ಹೇಳಿ ನಮ್ಮ ಸರತಿ ಸಾಲಿನ ದಂಡನ್ನು ಸಾಗ ಹಾಕಬೇಕಾದರೆ ವೈದ್ಯರಿಗೂ ಹೆಚ್ಚು ಕಮ್ಮಿ ಒಳಜ್ವರ ಕಾದಿರಬಹುದು. ಹಾಗಾಗಿ ಸೊಳ್ಳೆಯ ನಿಯಂತ್ರಣ ಒಂದೇ ಇದಕ್ಕೆ ಏಕೈಕ ಮದ್ದು ಅಂತ ಗೊತ್ತಾದಾಗ, ಮತ್ತೆ ಸೊಳ್ಳೆ ಕಂಡಾಗಲೆಲ್ಲಾ ಚಪ್ಪಾಳೆ ತಟ್ಟುವುದು ನಿತ್ಯದ ಕಾಯಕವಾಯಿತು. ಸಭೆ ಸಮಾರಂಭಗಳಲ್ಲಿ ಗಣ್ಯ ವ್ಯಕ್ತಿಗಳಿಗೂ ಇಷ್ಟು ಭರ್ಜರಿಯಾಗಿ ಚಪ್ಪಾಳೆ ಬಿದ್ದಿರಲಿಕ್ಕಿಲ್ಲ. ಇನ್ನು ಅನಾಫಿಲೀಸ್ ಎಂಬ ಹೆಣ್ಣು ಸೊಳ್ಳೆಯನ್ನು ಮಾತ್ರ ಪ್ರತ್ಯೇಕವಾಗಿ ಗುರುತಿಸುವುದೆಂತು? ಹಾಗಾಗಿ ಇದ್ದಬದ್ದ ಗಂಡು, ಹೆಣ್ಣು, ಅಜ್ಜ, ಅಜ್ಜಿ, ಮರಿ ಸೊಳ್ಳೆಗಳೆಲ್ಲಾ ನಮ್ಮ ಚಪ್ಪಾಳೆ ಕೈಯೊಳಗೆ ಅಪ್ಪಚ್ಚಿಯಾಗಿ ಬಿಡುತ್ತಿದ್ದವು.

ಕಾಲ ಎಷ್ಟೇ ಮುಂದುವರಿದರೂ ಯಃಕಶ್ಚಿತ್ ಒಂದು ಪುಟ್ಟ ಸೊಳ್ಳೆ ಕಚ್ಚಿ ನಮಗೆ ಜ್ವರ ಬಂದು ನಮ್ಮನ್ನು ಉದ್ದನೆ ಮಲಗಿಸಿ, ನಮ್ಮ ಜೀವಕ್ಕೇ ಸಂಚಾಕಾರ ತಂದೊಡ್ಡುವುದೆಂದರೆ ಇದು ಸಾಮಾನ್ಯ ಸಂಗತಿಯಾ?... ಅತ್ತ ಕಡೆಯಿಂದ ಅದರ ಸಂಹಾರ ಮಾಡಿದಷ್ಟೂ ಇತ್ತ ಕಡೆಯಿಂದ ಅದರ ಸಂತತಿ ವೃದ್ಧಿಯಾಗುತ್ತಲೇ ಹೋಗುತ್ತದೆ. ಸಣ್ಣ ಕೀಟವೊಂದು ದೈತ್ಯ ಮನುಷ್ಯನ ರಕ್ತ ಹೀರಿ ಬದುಕುವುದೆಂದರೆ... ಇದು ವಿಜ್ಞಾನಕ್ಕೊಂದು ಸವಾಲೇ ಅಲ್ಲವೇ? ಅಥವಾ ಮನುಷ್ಯ ಜಾತಿಗೊದಗಿದ ಅಪಮಾನವೇ?... ಅದೇನೇ ಇರಲಿ ಸಾಲು ಸಾಲು ಹೆಸರೇ ಗೊತ್ತಿಲ್ಲದ ಚಿಕೂನ್‌ಗುನ್ಯ, ಡೆಂಗಿ, ಇಲಿಜ್ವರ, ಹಂದಿ ಜ್ವರಗಳೆಲ್ಲಾ ಬಂದು ವಕ್ಕರಿಸಿದ ಮೇಲೆ ಮಲೇರಿಯಾದ ಅಂಕ ಮುಗಿದು ನೇಪಥ್ಯಕ್ಕೆ ಸರಿದಿದೆ.

ಆನೆ ಎಷ್ಟೇ ದೊಡ್ಡ ಗಾತ್ರದ ಬಲಶಾಲಿ ಪ್ರಾಣಿಯಾದರೂ ಪುಟಾಣಿ ಇರುವೆಯೊಂದು ಅದರ ಕಿವಿಯೊಳ ಹೊಕ್ಕಿ ಕಚ್ಚಿತೆಂದರೆ ಅಷ್ಟೇ. ಅದರ ಶಕ್ತಿ ಇರುವೆಯ ಯುಕ್ತಿಯ ಮುಂದೆ ಏನೇನು ಮಾಡಲಾರದು. ಆದಕಾರಣ ಈ ಪ್ರಪಂಚದಲ್ಲಿ ಸಮಯ ಸಂದರ್ಭ ಬಂದಾಗ ಎಲ್ಲರೂ ಒಂದೊಂದು ರೀತಿಯಲ್ಲಿ ಬುದ್ಧಿವಂತರು ಮತ್ತು ಬಲಶಾಲಿಗಳೇ ಅನ್ನುವುದು ಮಾತ್ರ ಒಪ್ಪತಕ್ಕ ವಿಷಯವೇ ಸರಿ. ಚಿಕೂನ್‌ಗುನ್ಯ ಬಂದ ಸಮಯ, ಆ ಜ್ವರ ಎಲ್ಲರನ್ನು ಎಷ್ಟು ಅಲ್ಲಾಡಿಸಿಬಿಟ್ಟಿತೆಂದರೆ, ನಡೆಯೋಕೆ ಆಗದಷ್ಟು, ನೆಟ್ಟಗೆ ನಿಲ್ಲೋಕು ಆಗದಷ್ಟು. ಬಹುಶಃ ಚಿಕೂನ್‌ಗುನ್ಯ ದೇಹವನ್ನು ಘಾಸಿಗೊಳಿಸಿದಷ್ಟು ಮತ್ಯಾವ ಜ್ವರವೂ ಬೇನೆ ಉಂಟು ಮಾಡಿರಲಿಕ್ಕಿಲ್ಲವೇನೋ. ಇವತ್ತಿಗೂ ಮಾಸದಂತೆ ಅದರ ಕುರುಹನ್ನು ಉಳಿಸಿಬಿಟ್ಟಿದೆ. ಆದರೆ ವೈದ್ಯರಿಗೆ ಮಾತ್ರ ಶುಕ್ರ ದೆಸೆ. ಸರತಿ ಸಾಲಿನಂತೆ ರೋಗಿಗಳು. ಅವರೆಲ್ಲರ ಅದೃಷ್ಟ ಖುಲಾಯಿಸಿ ಏಕ್ ದಂ ಎಲ್ಲರ ಡ್ರಾಯರ್‌ಗಳೂ ದಿನದೊಳಗೇ ಭರ್ತಿಯಾಗಿ ಬಿಡುತ್ತಿದ್ದವು. ಎಲ್ಲರಿಗೂ ಒಂದು ಕಾಲ ಬಂದೇ ಬರುತ್ತೆ ಅಂತ ನಮ್ಮ ಹಿರಿಯರು ಸುಮ್ಮಗೆ ಹೇಳಲಿಲ್ಲ ನೋಡಿ. ಆದರೂ ಈಗ ಏನಿದ್ದರೂ ರಕ್ತ ಹೀರುವ ಸೊಳ್ಳೆಗಳದೇ ಅಧಿಪತ್ಯ. ಯಾವುದೋ ಊರಿನಲ್ಲಿ ಅಲೆಮಾರಿಯಂತೆ ಅಲೆದಾಡುತ್ತಿದ್ದ ಡೆಂಗಿ ಈಗ ನಮ್ಮೂರನ್ನು ಆಕ್ರಮಿಸಿ ಬಿಟ್ಟಿದೆ. ಯಾವುದೋ ಇಡೀಪಸ್ ಎಂಬ ಸೊಳ್ಳೆ ಅಂತೆ.ಅಲ್ಲ! ಈ ಸೊಳ್ಳೆಗಳೆಲ್ಲಾ ಭಾಷೆ ಬಾರದಿದ್ದರೂ ಇಂಗ್ಲಿಷ್, ಇಟಾಲಿಕ್ ಹೆಸರಿಟ್ಟುಕೊಂಡು ರಾಜಾರೋಷವಾಗಿ ನಮ್ಮ ಮುಂದೆ ಗುಂಯಿ ಅಂತ ಗಸ್ತು ತಿರುಗಿಕೊಂಡು ನಮ್ಮನ್ನು ಆಳುತ್ತಿವೆ ಅಂದರೆ? ಬದುಕು ಎಲ್ಲಿಯವರೆಗೆ ನಮ್ಮನ್ನು ತಂದು ನಿಲ್ಲಿಸಿದೆ ಅಂದರೆ ಪ್ರತಿಕ್ಷಣ ಭೀತಿಯ ನೆರಳಲ್ಲಿ ಬದುಕುವಂತೆ. ಡೆಂಗಿ ಅಂತ ಹೆಸರು ಕೇಳಿದರೆ ಸಾಕು, ದೇಹ ಡಗ ಡಗ ಅಂತ ನಡುಗಲು ಶುರುವಾಗುತ್ತೆ.